ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 13-03-1971.

*ಬಂಧನ ಮುಕ್ತ ಆತ್ಮರ ಲಕ್ಷಣಗಳು* (बन्धनमुक्त आत्मा की निशानियाँ)

ಇಲ್ಲಿ ಕುಳಿತಿರುವವರೆಲ್ಲರೂ ತಮ್ಮನ್ನು ತಾವು ಬಂಧನ ಮುಕ್ತ ಎಂದು ತಿಳಿಯುತ್ತೀರಾ? ಅರ್ಥಾತ್ ಎಲ್ಲರೂ ಬಂಧನ ಮುಕ್ತ ಆಗಿರುವಿರಾ ಅಥವಾ ಇನ್ನೂ ಯಾವುದಾದರೂ ಬಂಧನ ಇದೆಯೇ? ಶಕ್ತಿ ಸೇನೆ ಬಂಧನಮುಕ್ತ ಆಗಿದೆಯೇ? ಸರ್ವ ಬಂಧಮುಕ್ತ ಆಗಿದ್ದೇವೆ ಎಂದು ತಿಳಿದುಕೊಳ್ಳುವವರು ಕೈ ಎತ್ತಿರಿ. ಸೇವೆಯ ಕಾರಣ ನಿಮಿತ್ತ ಮಾತ್ರ ಇದ್ದೇವೆ, ಅದು ಬೇರೆ ಮಾತಾಯಿತು. ಆದರೆ ನಿಮ್ಮ ಬಂಧನವನ್ನು ಸಮಾಪ್ತಿ ಮಾಡಿರುವಿರಾ? ನಮ್ಮ ನಾಮರೂಪದಲ್ಲಿ ಬಂಧನಮುಕ್ತರಾಗಿ ಕೇವಲ ನಿಮಿತ್ತ ಮಾತ್ರ ಸೇವೆಯ ಕಾರಣ ಈ ಶರೀರದಲ್ಲಿ ಕರ್ತವ್ಯಾರ್ಥ ಇದ್ದೇವೆ ಎಂದು ತಿಳಿಯುತ್ತೀರಾ? (ಹೆಚ್ಚಿನವರು ಕೈ ಎತ್ತಿದರು) ಯಾರೆಲ್ಲಾ ಕೈ ಎತ್ತಿರುವಿರೋ ಅವರು ಎಂದೂ ಸಂಕಲ್ಪ ಮಾತ್ರದಲ್ಲಿ ಸಂಕಲ್ಪ ಮತ್ತು ಶರೀರದ, ಪರಿಸ್ಥಿತಿಯ ಅಧೀನ ಮತ್ತು ಸಂಕಲ್ಪದಲ್ಲಿ ಸ್ವಲ್ಪ ಸಮಯಕ್ಕಾದರೂ ವ್ಯಾಕುಲತೆಯ ಅಥವಾ ಅದರ ಸ್ವಲ್ಪ ಲೇಶಮಾತ್ರ ಅನುಭವ ಮಾಡುತ್ತೀರಾ ಅಥವಾ ಅದನ್ನೂ ಪಾರು ಮಾಡಿರುವಿರೋ? ಬಂಧನ ಮುಕ್ತ ಆಗಿದ್ದರೆ ಮನಸ್ಸಿನ ವಶ ಅರ್ಥಾತ್ ವ್ಯರ್ಥ ಸಂಕಲ್ಪಗಳ ವಶ ಆಗುವುದಿಲ್ಲ. ವ್ಯರ್ಥ ಸಂಕಲ್ಪಗಳ ಮೇಲೆ ಪೂರ್ಣ ನಿಯಂತ್ರಣ ಇರುತ್ತದೆ. ಪರಿಸ್ಥಿತಿಗಳಿಗೂ ವಶ ಆಗುವುದಿಲ್ಲ. ಪರಿಸ್ಥಿತಿಗಳನ್ನು ಎದುರಿಸುವ ಪೂರ್ಣ ಶಕ್ತಿ ಇರುತ್ತದೆ. ಯಾರು ಕೈ ಎತ್ತಿರುವಿರೋ ಅವರು ಈ ರೀತಿ ಇರುವಿರಾ? ಬಂಧನ ಮುಕ್ತ ಆಗಿರುವವರ ಚಿನ್ಹೆ ಏನಾಗಿರುತ್ತದೆ? ಬಂಧನ ಮುಕ್ತ ಆಗಿರುವವರು ಸದಾ ಯೋಗಯುಕ್ತ ಆಗಿರುತ್ತಾರೆ. ಬಂಧನ ಮುಕ್ತದ ಚಿನ್ಹೆ ಆಗಿದೆ ಯೋಗಯುಕ್ತ. ಮತ್ತು ಯಾರು ಯೋಗಿ ಆಗಿರುತ್ತಾರೆ, ಯೋಗಿ ಆದವರ ಮುಖ್ಯ ಯಾವ ಗುಣ ಕಂಡು ಬರುತ್ತದೆ? ಬೇಕಂತಲೇ ಬುದ್ಧಿಯ ಆಟ ಆಡಿಸುತ್ತಿದ್ದೇವೆ. ಇಂತಹ ಯೋಗಿಯ ಮುಖ್ಯ ಗುಣ ಅಥವಾ ಲಕ್ಷಣ ಏನಾಗಿರುತ್ತದೆ? ಎಷ್ಟು ಯೋಗಿಯೋ ಅಷ್ಟು ಸರ್ವರ ಸಹಯೋಗಿ ಮತ್ತು ಸರ್ವರ ಸಹಯೋಗದ ಅಧಿಕಾರಿ ಸ್ವತಃ ಆಗುತ್ತಾರೆ. ಯೋಗಿ ಅರ್ಥಾತ್ ಸಹಯೋಗಿ, ಯಾರು ಎಷ್ಟು ಯೋಗಿಯೋ ಅಷ್ಟು ಅವರಿಗೆ ಸಹಯೋಗ ಅವಶ್ಯ ಪ್ರಾಪ್ತಿ ಆಗುತ್ತದೆ. ಸರ್ವರ ಸಹಯೋಗ ಪ್ರಾಪ್ತಿ ಮಾಡಿಕೊಳ್ಳಬೇಕೆಂದರೆ ಯೋಗಿ ಆಗಿರಿ. ಯೋಗಿ ಆದವರಿಗೆ ಸಹಯೋಗ ಏಕೆ ಪ್ರಾಪ್ತಿಯಾಗುತ್ತದೆ? ಏಕೆಂದರೆ ಬೀಜದ ಜೊತೆ ಯೋಗ ಜೋಡಿಸುತ್ತಾರೆ. ಬೀಜದ ಜೊತೆ ಸಂಬಂಧ ಅಥವಾ ಸ್ನೇಹ ಇರುವ ಕಾರಣ ಅದರ ಪ್ರತಿಯಾಗಿ ಸಹಯೋಗವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಆದ್ದರಿಂದ ಬೀಜದ ಜೊತೆ ಸ್ನೇಹ ಮಾಡುವವರು, ಬೀಜಕ್ಕೆ ಸ್ನೇಹದ ನೀರು ಹಾಕುವವರು ಸರ್ವಾತ್ಮರಿಂದ ಸಹಯೋಗ ರೂಪಿ ಫಲವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಯಾವ ರೀತಿ ಸಾಧಾರಣ ವೃಕ್ಷದಿಂದ ಫಲ ಪ್ರಾಪ್ತಿ ಮಾಡಿಕೊಳ್ಳಬೇಕೆಂದರೆ ಏನು ಮಾಡುತ್ತಾರೆ? ಅದೇ ರೀತಿ ಯಾರು ಯೋಗಿ ಆಗಿದ್ದಾರೆಯೋ ಅವರು ಒಬ್ಬೊಬ್ಬರ ಜೊತೆ ಯೋಗ ಜೋಡಿಸುವ ಅವಶ್ಯಕತೆ ಇಲ್ಲ. ಒಬ್ಬೊಬ್ಬರಿಂದ ಸಹಯೋಗ ಪಡೆಯುವ ಆಸೆ ಇರುವುದಿಲ್ಲ. ಆದರೆ ಒಬ್ಬ ಬೀಜದ ಜೊತೆ ಯೋಗ ಅರ್ಥಾತ್ ಸಂಬಂಧ ಇರುವುದರಿಂದ ಸರ್ವಾತ್ಮರು ಅರ್ಥಾತ್ ಇಡೀ ವೃಕ್ಷದೊಂದಿಗೆ ಸಂಬಂಧ ಆಗಿಬಿಡುತ್ತದೆ. ಆದ್ದರಿಂದ ಸಂಬಂಧ ಜೋಡಿಸುವದರ ಕಡೆ ಗಮನವಿರಬೇಕು. ಹೀಗೆ ಸಹಯೋಗಿ ಆಗಲು ಎಷ್ಟು ಮತ್ತು ಎಂತಹ ಯೋಗಿ ಆಗಿದ್ದೇನೆ ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿ. ಸಂಪೂರ್ಣ ಯೋಗಿ ಆಗಿಲ್ಲದಿದ್ದರೆ ಸಂಪೂರ್ಣ ಸಹಯೋಗಿ ಆಗಲು ಸಾಧ್ಯವಿಲ್ಲ. ಸಹಯೋಗ ಸಿಗಲೂ ಸಾಧ್ಯವಿಲ್ಲ. ಯಾರು ಎಷ್ಟೇ ಪ್ರಯತ್ನ ಮಾಡಿದರೂ ಬೀಜದ ಜೊತೆ ಯೋಗವನ್ನಿಡದೇ ಎಲೆಗಳಿಂದ ಅರ್ಥಾತ್ ಯಾವುದೇ ಆತ್ಮನಿಂದ ಸಹಯೋಗ ಪ್ರಾಪ್ತಿಯಾಗುವುದು ಅಸಾಧ್ಯ. ಆದ್ದರಿಂದ ಸರ್ವರ ಸಹಯೋಗಿ ಆಗಲು ಮತ್ತು ಸರ್ವರಿಂದ ಸಹಯೋಗ ಪಡೆಯಲು ಸಹಜ ಪುರುಷಾರ್ಥ ಯಾವುದು? ಬೀಜ ರೂಪನ ಜೊತೆ ಸಂಬಂಧ ಅರ್ಥಾತ್ ಯೋಗ, ಆಗ ಪ್ರತಿಯೊಬ್ಬರಿಂದ ಪರಿಶ್ರಮ ಪಟ್ಟು ಪ್ರಾಪ್ತಿ ಮಾಡಿಕೊಳ್ಳುವ ಆಶೆ ಸಮಾಪ್ತಿಯಾಗುತ್ತದೆ. ಪರಿಶ್ರಮದಿಂದ ಬಿಡುಗಡೆ ಆಗುತ್ತಾರೆ. ಹತ್ತಿರದ ದಾರಿ ಇದೇ ಆಗಿದೆ. ಸರ್ವರ ಸಹಯೋಗಿ, ಸದಾ ಯೋಗ ಯುಕ್ತ ಆಗಿದ್ದರೆ ಬಂಧನ ಮುಕ್ತ ಸಹ ಅವಶ್ಯ ಅಗುವಿರಿ ಏಕೆಂದರೆ ಸರ್ವ ಶಕ್ತಿಗಳ ಸಹಯೋಗ, ಸರ್ವ

ಆತ್ಮರ ಸಹಯೋಗ ಪ್ರಾಪ್ತಿಯಾಗುತ್ತದೆ ಆಗ ಇಂತಹ ಶಕ್ತಿ ಸ್ವರೂಪ ಆತ್ಮನಿಗೆ ಯಾವುದೇ ಬಂಧನವನ್ನು ಕತ್ತರಿಸುವುದು ಕಷ್ಟವಾಗುವುದೇ? ಬಂಧನಮುಕ್ತ ಆಗಲು ಯೋಗ ಯುಕ್ತರಾಗಬೇಕು. ಮತ್ತು ಯೋಗ ಯುಕ್ತರಾಗುವುದರಿಂದ ಸ್ನೇಹ ಮತ್ತು ಸಹಯೋಗ ಯುಕ್ತರಾಗುವಿರಿ. ಈ ರೀತಿ ಬಂಧನ ಮುಕ್ತರಾಗಿ. ಸಹಜ ಸಹಜ ಎಂದು ಹೇಳುತ್ತಾ ಎಷ್ಟು ಸಮಯ ಹಿಡಿಯಿತು.

ಇಂತಹ ಸ್ಥಿತಿ ಈಗ ಅವಶ್ಯ ಬರಬೇಕು. ಬಂಧನ ಮುಕ್ತ ಸ್ಥಿತಿಯ ಬಗ್ಗೆ ಈಗಾಗಲೇ ಹೇಳಲಾಗಿದೆ, ಶರೀರದಲ್ಲಿದ್ದರೂ ಕೇವಲ ನಿಮಿತ್ತ ಈಶ್ವರೀಯ ಕರ್ತವ್ಯಕ್ಕಾಗಿ ಮಾತ್ರ ಆಧಾರ ತೆಗೆದುಕೊಂಡಿದ್ದೇವೆ ಎಂದು ಭಾವಿಸಬೇಕು. ಯಾವ ಅಧೀನತೆಯೂ ಇರಬಾರದು. ನಿಮಿತ್ತ ಆಧಾರ ತೆಗೆದುಕೊಂಡಿದ್ದೇವೆ. ಯಾರು ಶರೀರವನ್ನು ನಿಮಿತ್ತ ಆಧಾರ ಎಂದು ತಿಳಿಯುತ್ತಾರೆಯೋ ಅವರು ಎಂದೂ ಅಧೀನರಾಗುವುದಿಲ್ಲ. ನಿಮಿತ್ತ ಆಧಾರ ಮೂರ್ತಿಗಳೇ ಸರ್ವಾತ್ಮರ ಆಧಾರ ಮೂರ್ತಿಯಾಗಲು ಸಾಧ್ಯ. ಯಾರು ಸ್ವಯಂ ಅಧೀನ ಆಗಿರುತ್ತಾರೆಯೋ ಅವರು ಉದ್ಧಾರ ಮಾಡಲು ಹೇಗೆ ಸಾಧ್ಯ ಆದ್ದರಿಂದ ಎಷ್ಟು ಅಧೀನತೆಯಿಂದ ದೂರ ಇರುತ್ತೀರೋ ಅಷ್ಟು ಸೇವೆಯಲ್ಲಿ ಸಫಲತೆಯೂ ಲಭಿಸುತ್ತದೆ. ಆದ್ದರಿಂದ ಸರ್ವರ ಸಫಲತೆಗಾಗಿ ಸರ್ವ ಅಧೀನತೆಯಿಂದ ದೂರ ಆಗುವುದು ಬಹಳ ಅವಶ್ಯವಾಗಿದೆ. ಇಂತಹ ಸ್ಥಿತಿಯನ್ನು ರೂಪಿಸಿಕೊಳ್ಳಲು ಎರಡು ಶಬ್ದಗಳನ್ನು ನೆನಪಿಡಿ ಅದರಿಂದ ಸಹಜವಾಗಿ ಈ ಸ್ಥಿತಿಯನ್ನು ಪಡೆಯುತ್ತೀರಿ. ಆ ಎರಡು ಶಬ್ದಗಳು ಯಾವವು? ಯಾವಾಗ ಬಂಧನ ಮುಕ್ತ ಆಗುತ್ತೀರೋ ಆಗ ಯಾವ ರೀತಿ ಟೆಲಿಫೋನಿನಲ್ಲಿ ಪರಸ್ಪರರ ಧ್ವನಿಯನ್ನು ಗುರುತಿಸುವ ರೀತಿ ಯಾರ ಸಂಕಲ್ಪದಲ್ಲಿ ಏನಿದೆ ಎಂದು ಗುರುತಿಸಲು ಸಾಧ್ಯವಾಗುತ್ತದೆ. ಈಗ ಇನ್ನೂ ತಯಾರಾಗುತ್ತಿರುವಿರಿ ಆದ್ದರಿಂದ ವಿಚಾರ ಮಾಡಬೇಕಾಗುತ್ತದೆ. ಎರಡು ಶಬ್ದಗಳಾಗಿವೆ ಒಂದು ಸಾಕ್ಷಿ ಮತ್ತು ಇನ್ನೊಂದು ಜೊತೆಗಾರ(ಸಾಥಿ), ಒಂದು, ಜೊತೆಗಾರರನ್ನು ಸದಾ ಜೊತೆಯಲ್ಲಿಟ್ಟುಕೊಳ್ಳಿ ಮತ್ತು ಇನ್ನೊಂದು ಸಾಕ್ಷಿ ಆಗಿ ಪ್ರತಿಯೊಂದು ಕರ್ಮವನ್ನು ಮಾಡಿ. ಆದ್ದರಿಂದ ಸಾಕ್ಷಿ ಮತ್ತು ಸಾಥಿ ಈ ಎರಡೂ ಶಬ್ದಗಳನ್ನು ಪ್ರ್ಯಾಕ್ಟಿಕಲ್‌ನಲ್ಲಿ ತನ್ನಿರಿ ಆಗ ಬಂಧನಮುಕ್ತದ ಸ್ಥಿತಿ ಬಹಳ ಬೇಗ ಬರುತ್ತದೆ. ಸರ್ವಶಕ್ತಿವಂತನ ಜೊತೆ ಇರುವುದರಿಂದ ಸರ್ವ ಶಕ್ತಿಗಳೂ ಪ್ರಾಪ್ತಿಯಾಗುತ್ತವೆ. ಮತ್ತು ಜೊತೆ- ಜೊತೆಗೆ ಸಾಕ್ಷಿ ಆಗಿ ನಡೆಯುವುದರಿಂದ ಯಾವ ಬಂಧನದಲ್ಲೂ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಆದ್ದರಿಂದ ಬಂಧನಮುಕ್ತರಾಗಲು ಈ ಎರಡು ಶಬ್ದಗಳನ್ನು ನೆನಪಿಡಿ. ಯೋಗ ಮತ್ತು ಸಹಯೋಗ, ಎರಡೂ ಮಾತುಗಳು ಬಂದವು. ಈಗ ಇಂತಹ ಪುರುಷಾರ್ಥ ಎಷ್ಟು ಸಮಯದಲ್ಲಿ ಮಾಡುತ್ತೀರಿ? ಸಂಪೂರ್ಣ ಬಂಧನ ಮುಕ್ತರಾಗಿ ಸಾಕ್ಷೀತನದಲ್ಲಿದ್ದು ನಿಮಿತ್ತ ಮಾತ್ರ ಈ ಶರೀರದಲ್ಲಿದ್ದು ಕರ್ತವ್ಯ ಮಾಡಬೇಕು. ಈಗ ಈ ಬಾರಿ ನಿಮ್ಮೊಂದಿಗೆ ನೀವು ಪ್ರತಿಜ್ಞೆ ಮಾಡಿ ಹೋಗಿ ಏಕೆಂದರೆ ನಿಮಗೆ(ಟೀಚರ್ಸ) ಸಹಜವೂ ಇದೆ. ಟೀಚರ್ಸ್ ಗೆ ವಿಶೇಷ ಸಹಜ ಏಕೆ? ಏಕೆಂದರೆ ನಿಮ್ಮ ಪೂರ್ಣ ಜೀವನವೇ ನಿಮಿತ್ತ ಇದೆ. ತಿಳಿಯಿತೆ. ಟೀಚರ್ಸ್ ನಿಮಿತ್ತ ಆಗಿಯೇ ಇರುವಿರಿ. ಆದ್ದರಿಂದ ಈ ಶರೀರದಲ್ಲಿಯೂ ನಾವು ನಿಮಿತ್ತ ಮಾತ್ರ ಇದ್ದೇವೆ ಎನ್ನುವ ಸಂಕಲ್ಪ ಇರಬೇಕು. ಇದು ಸಹಜವಾಗಿದೆ ಅಲ್ಲವೆ. ಇವರಿಗೆ (ಅಣ್ಣಂದಿರಿಗೆ) ಡಬಲ್ ಹೊಣೆಗಾರಿಕೆಯಿದೆ ಆದ್ದರಿಂದ ಇವರು ದೂರ ಆಗಲು ಯುದ್ಧ ಮಾಡಬೇಕಾಗುತ್ತದೆ. ನಿಮಿತ್ತ ಆಗಿಯೇ ಇರುವವರಿಗೆ ಸಹಜವಾಗಿದೆ. ನಿಮಗೆ(ಮಾತೆಯರಿಗೆ) ಸಹಜ ಯಾವುದು? ಯಾವ ರೀತಿ ಇವರಿಗೆ ಈ ವಿಶೇಷ ಮಾತಿನಿಂದಾಗಿ ಸಹಜವಾಗಿದೆಯೋ ಅದೇ ರೀತಿ ನಿಮಗೆ ಯಾವ ಒಂದು ಮಾತಿನ ಕಾರಣದಿಂದ ಸಹಜವಾಗುತ್ತದೆ. ಪ್ರವೃತ್ತಿಯಲ್ಲಿರುವವರಿಗೆ ಸಹಜವಾಗಿದೆ ಏಕೆಂದರೆ ಅವರ ಮುಂದೆ ಸದಾ ವ್ಯತ್ಯಾಸ ಇರುತ್ತದೆ. ವ್ಯತ್ಯಾಸ ಇರುವ ಕಾರಣ ನಿರ್ಣಯ ಮಾಡುವುದು ಸಹಜ ಆಗುತ್ತದೆ. ನಿರ್ಣಯ ಮಾಡುವ ಶಕ್ತಿ ಕಡಿಮೆ ಇದೆ ಆ ಕಾರಣ ಸಹಜವೆನಿಸುವುದಿಲ್ಲ. ಇದರಿಂದ ಏನು ಪ್ರಾಪ್ತಿ ಇದೆ ಎಂದು ಒಂದು ಬಾರಿ ಅನುಭವ ಮಾಡಿದ್ದೀರಿ. ಆಗ ನಿರ್ಣಯ ಆಗಿಯೇ ಬಿಡುತ್ತದೆ. ಒಂದು ಬಾರಿ ಪೆಟ್ಟಿನ ಅನುಭವವಾದ ಮೇಲೆ ಬಾರಿ ಬಾರಿಗೂ ಪೆಟ್ಟು ತಿನ್ನುವರೇನು? ನಿರ್ಣಯ ಶಕ್ತಿ ಕಡಿಮೆ ಇದ್ದರೆ ಕಷ್ಟವೆನಿಸುತ್ತದೆ. ಪ್ರವೃತ್ತಿಯಲ್ಲಿ ಅಥವಾ ಪರಿವಾರದಲ್ಲಿ ಇರುವವರು, ಅದರ ಅನುಭವಿಯಾಗಿರುವ ಕಾರಣ, ಎದುರಿಗೆ ವ್ಯತ್ಯಾಸ ಇರುವ ಕಾರಣ ಮೋಸದಿಂದ ಪಾರಾಗುತ್ತೀರಿ. ಯಾರು ವರದಾನದ ಅಧಿಕಾರಿಯಾಗುತ್ತಾರೆಯೋ ಅವರು ಯಾವುದಕ್ಕೂ ಅಧೀನವಾಗಿರುವುದಿಲ್ಲ. ತಿಳಿಯಿತೆ. ಹಾಗಾದರೆ ಈಗ ಅಧೀನತೆ ಸಮಾಪ್ತಿ ಅಧಿಕಾರ ಶುರು. ಎಂದೂ ಯಾವುದೇ ಅಧೀನತೆಯ ಸಂಕಲ್ಪವೂ ಬರಬಾರದು. ಈ ರೀತಿ ಪಕ್ಕಾ ನಿಶ್ಚಯ ಇದೆಯೇ? ನಿಶ್ಚಯದಲ್ಲಿ ಎಂದೂ ಪರ್ಸೆಂಟೇಜ್ ಇರುವುದಿಲ್ಲ. ಶಕ್ತಿಸೇನೆ ನಿಮ್ಮಲ್ಲಿ

ಏನು ಧಾರಣೆ ಮಾಡಿಕೊಂಡಿರುವಿರಿ? ಯಾವಾಗ ಸ್ನೇಹ ಮತ್ತು ಶಕ್ತಿ ಸಮಾನವಾಗುತ್ತದೆಯೋ ಆಗ ಸಂಪೂರ್ಣವಾದಂತೆ. ನಿಮ್ಮ ಶೂರವೀರ ರೂಪದ ಸಾಕ್ಷಾತ್ಕಾರ ಮಾಡಿರುವಿರಾ? ಶೂರವೀರರಾದವರು ಎಂದೂ ಯಾವುದಕ್ಕೂ ಹೆದರುವುದಿಲ್ಲ. ಆದರೆ ಶೂರವೀರರ ಮುಂದೆ ಬರುವವರು ಹೆದರುತ್ತಾರೆ. ಆದ್ದರಿಂದ ಈಗ ಯಾವ ಶೂರವೀರತನದ ಸಾಕ್ಷಾತ್ಕಾರ ಮಾಡಿದ್ದೀರಿ ಅದನ್ನೇ ಸದಾ ಮುಂದಿಟ್ಟುಕೊಳ್ಳಿ. ಮತ್ತು ಇಂದು ಯಾವ ಎರಡು ಶಬ್ದಗಳನ್ನು ತಿಳಿಸಲಾಗಿದೆಯೋ ಅದನ್ನು ಸದಾ ನೆನಪಿಟ್ಟುಕೊಳ್ಳಿ. ಒಳ್ಳೆಯದು.

ಅವ್ಯಕ್ತ ಮುರಳಿ 13-03-1971.

***ಬಂಧನಮುಕ್ತ ಆತ್ಮರ ಲಕ್ಷಣಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಬಂಧನ ಮುಕ್ತ ಸ್ವರೂಪ.

2. ನಾನು ಬಂಧನ ಮುಕ್ತವಾಗಿ ಕೇವಲ ನಾಮ ಮಾತ್ರವಾಗಿ ಸೇವಾರ್ಥ, ಕರ್ತವ್ಯಾರ್ಥ ಈ ಶರೀರದಲ್ಲಿ ಇದ್ದೇನೆ.

3. ನಾನು ಸಂಕಲ್ಪಗಳಿಗೆ ವಶವಾಗದೆ ಪರಿಸ್ಥಿತಿಗಳನ್ನು ಎದುರಿಸುವ ಸಂಪೂರ್ಣ ಶಕ್ತಿಯುಳ್ಳ ಬಂಧನಮುಕ್ತ ಸ್ವರೂಪ.

4. ನಾನು ಯೋಗಯುಕ್ತವಾಗಿರುವ ಸರ್ವರ ಸಹಯೋಗಿ.

5. ನಾನು ಬೀಜರೂಪ ಪರಮಾತ್ಮನೊಂದಿಗೆ ಸಂಬಂಧವಿಟ್ಟಿರುವ ಕಾರಣ ಸರ್ವಾತ್ಮರು ಅರ್ಥಾತ್ ಇಡೀ ವೃಕ್ಷದೊಂದಿಗೆ ಸಂಬಂಧವಿದೆ.

6. ನಾನು ಈ ಶರೀರವನ್ನು ಕೇವಲ ಈಶ್ವರೀಯ ಕರ್ತವ್ಯಕ್ಕಾಗಿ, ನಿಮಿತ್ತವಾಗಿ ಆಧಾರ ಪಡೆದುಕೊಂಡಿದ್ದೇನೆ.

7. ನಿಮಿತ್ತ ಆಧಾರ ಮೂರ್ತಿಯಾದ ನಾನು ಸರ್ವಾತ್ಮರಿಗೆ ಆಧಾರ ಮೂರ್ತಿ.

8. ನಾನು ಸರ್ವ ಅಧೀನತೆಗಳಿಂದ ಅತೀತವಾಗಿ ಸೇವೆಯಲ್ಲಿ ಸಫಲತೆಯನ್ನು ಪಡೆದಿದ್ದೇನೆ.

9. ನಾನು ಸದಾ ಸಾಥಿಯನ್ನು ಜೊತೆಗಿಟ್ಟುಕೊಂಡು ಪ್ರತಿಯೊಂದು ಕರ್ಮವನ್ನು ಸಾಕ್ಷಿಯಾಗಿ ಆಚರಿಸುತ್ತಿದ್ದೇನೆ.

10. ನಾನು ಸರ್ವಶಕ್ತಿವಂತನನ್ನು ಸಾಥಿಯನ್ನಾಗಿ ಮಾಡಿಕೊಂಡು ಸರ್ವಶಕ್ತಿಗಳನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

11. ನಾನು ಸಾಕ್ಷಿಯಾಗಿರುವ ಕಾರಣ ಎಲ್ಲಾ ಬಂಧನಗಳಿಂದ ರಕ್ಷಿಸಲ್ಪಡುತ್ತಿದ್ದೇನೆ.

12. ನಾನು ಸಮಯಕ್ಕೆ ಸರಿಯಾಗಿ ನಿರ್ಣಯವನ್ನು ತೆಗೆದುಕೊಂಡು ಎಲ್ಲಿಯೂ ಮೋಸ ಹೋಗದ ನಿರ್ಣಯ ಶಕ್ತಿ ಸ್ವರೂಪ.

13. ನಾನು ಸ್ನೇಹ ಮತ್ತು ಶಕ್ತಿಯನ್ನು ಸಮಾನವಾಗಿ ಧಾರಣೆ ಮಾಡಿರುವ ಸಂಪೂರ್ಣ ಸ್ವರೂಪ.